## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಹೇಳಿಕೆ.

**ವಿಷಯ:-** ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿ ಮನವಿ

*******

**ಮಾನ್ಯ ಸದಸ್ಯರ ಪ್ರಸ್ತಾವ:** "ಆರು ರುದ್ರಭೂಮಿಗಳಿದ್ದರೂ ಇತರ ಗ್ರಾಮಗಳೇ ಆಧಾರ| ಕಟ್ಟಡದ ಅವರಣದ ಸುತ್ತಲೂ ಹಬ್ಬಿಕೊಂಡಿದೆ ಗಿಡಗಂಟಿ, ಅಲ್ಲಲ್ಲಿ ಕಸಕಡ್ಡಿ, ನೀರಿನ ಬಾಟಲಿ ಬೇಕಿದೆ ಸಮರ್ಪಕ ನಿರ್ವಹಣೆ" ಎಂಬ ಶೀರ್ಷಿಕೆಯಡಿ ದಿನಾಂಕ:07-02-2024ರ ಹೊಸದಿಗಂತ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಅಸಮರ್ಪಕ ನೀರಿನ ವ್ಯವಸ್ಥೆ, ಕುಸಿದು ಬಿದ್ದಿರುವ ಆವರಣ ಗೋಡೆ, ಅಸಮರ್ಪಕ ನಿರ್ವಹಣೆ ಕೊರತೆಯಿಂದಾಗಿ ಉಪಯೋಗ ಶೂನ್ಯ ಇದು ಬೆಳ್ತಂಗಡಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಆರು ರುದ್ರಭೂಮಿಗಳಲ್ಲಿ ಕಾಡುತ್ತಿರುವ ಸಮಸ್ಯೆಯಾಗಿದೆ. ಇದರಿಂದಾಗಿ ಅನಿವಾರ್ಯ ಸಂದರ್ಭಗಳಲ್ಲಿ ನೆರೆಯ ಗ್ರಾಮಗಳನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸುಮಾರು 10,000ಕ್ಕೂ ಹೆಚ್ಚು ಜನಸಂಖ್ಯೆಯುಳ್ಳ ಪಟ್ಟಣ ಪಂಚಾಯತ್ ಇದಾಗಿದ್ದು, ಇದರ ಭೌಗೋಳಿಕ ವಿಸ್ತೀರ್ಣ 8.5 ಕಿಲೋಮೀಟರ್ ಇಲ್ಲಿ ಕ್ರೀಡಾಂಗಣದ ಬಳಿ 65 ಸೆಂಟ್ಸ್ ಜಾಗದಲ್ಲಿ ರೆಂಕೆದ ಗುತ್ತು ಕೆಳಕೋಟೆಯಲ್ಲಿ 2.04 ಎಕರೆ, ಸುದೆ ಮುಗೇರುವಿನಲ್ಲಿ 85 ಸೆಂಟ್ಸ್, ಹುಣಸೆಕಟ್ಟೆಯಲ್ಲಿ 70 ಸೆಂಟ್ಸ್, ಜೈನ ಪೇಟೆಯಲ್ಲಿ 76 ಸೆಂಟ್ಸ್ ಹಾಗೂ ನಗರದ ಪಕ್ಕದ ಲ್ಯಾಲದ ಬಳಿ ಕಲ್ಲಗುಡ್ಡೆ ಎಂಬಲ್ಲಿ 70 ಸೆಂಟ್ಸ್ ಜಾಗದಲ್ಲಿ ಒಟ್ಟು 6 ರುದ್ರಭೂಮಿಗಳಿವೆ. ಬೆಳ್ತಂಗಡಿ ಹೊಳೆ ಬದಿಯಲ್ಲಿರುವ ಹಿಂದು ರುದ್ರ ಭೂಮಿಯಲ್ಲಿ ಶವ ಸಂಸ್ಕಾರಗಳು ನಡೆಯದೇ ಹಲವಾರು ವರ್ಷಗಳೇ ಉರುಳಿವೆ. ರುದ್ರಭೂಮಿಯವರೆಗೆ ರಸ್ತೆ ಸಂಪರ್ಕವಿದೆ ಆದರೆ ಮೀಸಲಾದ ಜಾಗದ ಸುತ್ತ ಹುಲ್ಲು, ಮುಳ್ಳು, ಗಿಡಗಂಟಿ ಬೆಳೆದು ನಿಂತಿದೆ. ರುದ್ರ ಭೂಮಿಯ ಜಾಗದಲ್ಲಿ ಕಸ ಕಡ್ಡಿ, ನೀರಿನ ಬಾಟಲಿ ತ್ಯಾಜ್ಯಗಳು ತುಂಬಿ ತುಳುಕುತ್ತಿವೆ.

ತುರ್ತು ಆಧಾರವಾದ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿರುವ ಎಲ್ಲಾ ರುದ್ರಭೂಮಿಗಳು ಅವ್ಯವಸ್ಥಿತವಾಗಿರುವ ಕಾರಣ ಹೆಚ್ಚಿನ ಜನರು ಅನಿವಾರ್ಯವಾಗಿ ಉಜಿರೆ ಗ್ರಾಮ ಪಂಚಾಯತಿಯ ಹಳೆಪೇಟೆಯಲ್ಲಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿರುವ ರುದ್ರ ಭೂಮಿಯನ್ನೇ ಅಗತ್ಯ ಸಂದರ್ಭಕ್ಕೆ ಬಳಸುವಂತಾಗಿದ್ದು, ಈ ಬಗ್ಗೆ ಸರಕಾರ, ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು ಸೂಕ್ತ ವ್ಯವಸ್ಥೆಗೆ ಮುಂದಾಗಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ. ಆದ್ದರಿಂದ ಪಟ್ಟಣ ಪಂಚಾಯತ್ ವ್ಯಾಪ್ತಿಗೆ ನಾಗರೀಕರ ಹಿತದೃಷ್ಟಿಯಿಂದ ಕೂಡಲೇ ರುದ್ರಭೂಮಿಗಳಿಗೆ ಸೂಕ್ತ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿ ಮಾನ್ಯ ಪೌರಾಡಳಿತ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಹೇಳಿಕೆ:**

ಬೆಳ್ತಂಗಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 06 ರುದ್ರ ಭೂಮಿಗಳಿದ್ದು, ಒದಗಿಸಿರುವ ಮೂಲಸೌಲಭ್ಯಗಳ ವಿವರಗಳು:-

| ಕ್ರ. ಸಂ | ರುದ್ರ ಭೂಮಿ ಹೆಸರು | ಸರ್ವೆ ನಂ | ವಿಸ್ತೀರ್ಣ | ವಿವರ |
|---|---|---|---|---|
| 1. | ಹೊಳೆಬದಿ ರುದ್ರಭೂಮಿ ಹಳೇಪೇಟೆ, ಬೆಳ್ತಂಗಡಿ | 96-5ಎ3ಎ2 | 0.65 ಎಕರೆ | ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅಮೃತ ನಗರೋತ್ಥಾನ ಹಂತ -4 ರ ಯೋಜನೆಯಡಿ 40.00 ಲಕ್ಷಗಳು ಕಾಯ್ದಿರಿಸಿದ್ದು, ಟೆಂಡರ್ ಹಂತದಲ್ಲಿ ಇರುತ್ತದೆ. ವಿದ್ಯುತ್, ಕುಡಿಯುವ ನೀರು, ಸಿಲಿಕಾನ್ ಚೇಂಬರ್ -2, ಕಾವಲುಗಾರರ ಕೊಠಡಿ ಸ್ನಾನ ಗೃಹ ಹಾಗೂ |

Scanned with OKEN Scanner

| | | | | |
|---|---|---|---|---|
| | | | | ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |
| 2 | ಕೇರಳಕೋಡಿ ರುದ್ರಭೂಮಿ ಕೇರಳಕೋಡಿ, ಬೆಳ್ತಂಗಡಿ | 218-2 | 2.04 ಎಕರೆ | 2 ಸಿಲಿಕಾನ್ ಚೇಂಬರ್ ಗಳನ್ನೊಳಗೊಂಡ ಶೆಡ್, ಕುಡಿಯುವ ನೀರು, ರಸ್ತೆ ಹಾಗೂ ವಿದ್ಯುತ್ ಸೌಕರ್ಯಗಳನ್ನು ಒದಗಿಸಲಾಗಿದೆ. |
| 3 | ಸುದೆಮುಗೇರು ರುದ್ರಭೂಮಿ ಸುದೇಮುಗೇರು ಬೆಳ್ತಂಗಡಿ | 187-1ಪಿ1 | 0.85 ಎಕರೆ | ಅನುಸೂಚಿತ ಜಾತಿ/ಪಂಗಡಗಳಿಗೆ ಮೀಸಲಿರಿಸಲಾಗಿದೆ ಹಾಗೂ ಮೂಲಭೂತ ಸೌಕರ್ಯಗಳಾದ ಶೆಡ್, ವಿದ್ಯುತ್, ಕುಡಿಯುವ ನೀರು, ಸ್ನಾನ ಗೃಹ ಹಾಗೂ ಶೌಚಾಲಯಯಗಳನ್ನು ಒದಗಿಸಿದೆ. |
| 4 | ಹುಣ್ಸೆಕಟ್ಟೆ ರುದ್ರಭೂಮಿ ಹುಣ್ಸೆಕಟ್ಟೆ, ಬೆಳ್ತಂಗಡಿ | 120-1ಪಿ1 | 0.70 ಎಕರೆ | ಶೆಡ್ ಅನ್ನು ರಚಿಸಿದ್ದು, ಭಾಗಶ: ಆವರಣ ಗೋಡೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. |
| 5 | ಜೈನ್‌ಪೇಟೆ ರುದ್ರಭೂಮಿ ಜೈನ್ ಪೇಟೆ ಬೆಳ್ತಂಗಡಿ | 73-1ಸಿ | 0.76 ಎಕರೆ | ಭಾಗಶ: ಆವರಣ ಗೋಡೆ ಹಾಗೂ ಮಣ್ಣಿನ ರಸ್ತೆ ರಚಿಸಲಾಗಿದೆ. |
| 6 | ಕಲ್ಲಗುಡ್ಡೆ ರುದ್ರ ಭೂಮಿ | 158-1 | 0.70 | ಈ ರುದ್ರಭೂಮಿಯು ಲೈಲಾ ಗ್ರಾಮಕ್ಕೆ ಒಳಪಟ್ಟಿದ್ದು, ಬೆಳ್ತಂಗಡಿ ಪಟ್ಟಣದ ಗಡಿಯಂಚಿನಲ್ಲಿರುವುದರಿಂದ ಸದರಿ ರುದ್ರಭೂಮಿಗೆ ರಸ್ತೆಯನ್ನು (ಮಾನ್ಯ ಶಾಸಕರ ಅನುದಾನದಲ್ಲಿ) ಹಾಗೂ ಪಟ್ಟಣ ಪಂಚಾಯಿತಿಯ 15 ನೇ ಹಣಕಾಸು ಯೋಜನೆಯಡಿ ಶೆಡ್ ಅನ್ನು ನಿರ್ಮಿಸಲಾಗಿರುತ್ತದೆ. |

ಬೆಳ್ತಂಗಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 06 ರುದ್ರ ಭೂಮಿಗಳಿಗೆ ಮೇಲ್ಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಅಗತ್ಯವಿರುವ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆದು, ಸರ್ಕಾರದ ಅನುದಾನದ ಲಭ್ಯತೆಗೆ ಅನುಗುಣವಾಗಿ ನಿಯಮಾನುಸಾರ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ:ನಅಇ 36 ಸಮಸ 2024

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

Scanned with OKEN Scanner